# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22ನೇ ಸಾಲಿನ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಅಡಿಯಲ್ಲಿ ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-1) ಆದೇಶ ಸಂಖ್ಯೆ: ಪಸಂಮೀ/ಇ-166/ಮೀಇಯೋ/2021, ದಿನಾಂಕ: 26-04-2021.

2) ಆದೇಶ ಸಂಖ್ಯೆ: ಪಸಂಮೀ/ಇ-164/ಮೀಇಯೋ/2020, ದಿನಾಂಕ: 15-04-2021,19-04-2021, 28-04-2021 ಮತ್ತು 07-05-2021.

3) ಆದೇಶ ಸಂಖ್ಯೆ: ಪಸಂಮೀ/ಇ-198/ಮೀಇಯೋ/2021, ದಿನಾಂಕ: 01-07-2021, 16-07-2021, 04-09-2021, 01-10-2021 ಮತ್ತು 13-10-2021.

4) ಆದೇಶ ಸಂಖ್ಯೆ: ಪಸಂಮೀ/ಇ-274/ಮೀಇಯೋ/2021, ದಿನಾಂಕ: 30-09-2021, 13-10-2021 ಮತ್ತು 27-10-2021.

5) ಆದೇಶ ಸಂಖ್ಯೆ: ಪಸಂಮೀ/ಇ-297/ಮೀಇಯೋ/2021, ದಿನಾಂಕ: 25-11-2021, 12-01-2022, 19-01-2022 ಮತ್ತು 14-02-2022.

6) ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರ ಸಂಖ್ಯೆ: DoF-ADMNOBGT/18/2021 ದಿನಾಂಕ: 18-02-2022.

******

<u>ಪ್ರಸ್ತಾವನೆ:</u>

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ವಿವಿಧ ರಾಜ್ಯ ವಲಯ, ಕೇಂದ್ರ ವಲಯ ಮತ್ತು ಕೇಂದ್ರ ಪುರಸ್ಕೃತ ಜಿಲ್ಲಾ ಪಂಚಾಯತ್ ಯೋಜನೆಗಳನ್ನು ಸಂಬಂಧಪಟ್ಟ ಹುದ್ದೆಗಳೊಂದಿಗೆ 2021-22ನೇ ಸಾಲಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶಗಳಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-00-001-0-01 ರಡಿ ರೂ.447.50 ಲಕ್ಷಗಳನ್ನು ಮತ್ತು ರೂ.120.50 ಲಕ್ಷಗಳನ್ನು ವೇತನ ಹಾಗೂ ಕಛೇರಿ ವೆಚ್ಚಕ್ಕಾಗಿ ಮತ್ತು 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.3627.44 ಲಕ್ಷ ಮತ್ತು ರೂ.1544.75 ಲಕ್ಷಗಳನ್ನು ಪ್ರಥಮ ಕಂತಿನ ಅನುದಾನವಾಗಿ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.2105.50 ಲಕ್ಷಗಳನ್ನು, ರೂ. 2600.00 ಲಕ್ಷಗಳನ್ನು ಮತ್ತು ರೂ.531.25 ಲಕ್ಷಗಳನ್ನು, ರೂ.151.50 ಲಕ್ಷಗಳನ್ನು ಮತ್ತು ರೂ. 352.06 ಲಕ್ಷಗಳ ದ್ವಿತೀಯ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

Kamakshi-2-U.A.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.691.50 ಲಕ್ಷ, ರೂ.4,523.55 ಲಕ್ಷ ಮತ್ತು ರೂ.25.00 ಗಳ ತೃತೀಯ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-00-001-0-01 ರಡಿ ರೂ.691.50 ಲಕ್ಷಗಳನ್ನು ವೇತನಕ್ಕಾಗಿ ಮತ್ತು ರೂ.2,114.30 ಲಕ್ಷಗಳನ್ನು ರೂ.112.75 ಲಕ್ಷಗಳನ್ನು ಮತ್ತು ರೂ.50.00 ಲಕ್ಷಗಳನ್ನು ನಾಲ್ಕನೇ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಏಕ ಕಡತ ಪತ್ರದಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಅಡಿ ಲೆಕ್ಕ ಶೀರ್ಷಿಕೆ 2405-00-103-0-23 (100 & 422) ಅಡಿಯಲ್ಲಿ 4ನೇ ಕಂತಿನ ಅನುದಾನ ರೂ.2434.50 ಲಕ್ಷ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಲೆಕ್ಕ ಶೀರ್ಷಿಕೆಯ ಉಪ ಶೀರ್ಷಿಕೆ 100 ರಲ್ಲಿ ಶೇ.68 ರಷ್ಟು ಹಾಗೂ ಉಪ ಶೀರ್ಷಿಕೆ 422 ರಡಿ ಶೇ.51 ರಷ್ಟು ಮಾತ್ರ ವೆಚ್ಚವಾಗಿದ್ದು, 4ನೇ ಕಂತಿನ ಹಣ ಬಿಡುಗಡೆ ಮಾಡಿದಲ್ಲಿ, ಮಾರ್ಚ್-2022 ರೊಳಗೆ ಪೂರ್ಣ ಮೊತ್ತವನ್ನು ವೆಚ್ಚ ಆಗುವುದಾಗಿ ತಿಳಿಸಿರುವುದರಿಂದ, ಸದರಿ ಲೆಕ್ಕ ಶೀರ್ಷಿಕೆಯಡಿ 4ನೇ ಕಂತಿನ ಅನುದಾನ ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂಖ್ಯೆ: ಪಸಂಮೀ ಇ-297 ಮೀಇಯೋ 2021, ಬೆಂಗಳೂರು</u>**
**<u>ದಿನಾಂಕ: 24-02-2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2021-22ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಅಡಿ ರೂ.2434.50 ಲಕ್ಷ (ಎರಡು ಸಾವಿರದ ನಾಲ್ಕುನೂರ ಮೂವತ್ತನಾಲ್ಕು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಕೆಳಕಂಡ ಲೆಕ್ಕ ಶೀರ್ಷಿಕೆ ಮುಂದೆ ನಮೂದಿಸಿರುವಂತೆ ನಾಲ್ಕನೆ ಕಂತಿನ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆ ಹೆಸರು | ಲೆಕ್ಕ ಶೀರ್ಷಿಕೆ | ಆಯವ್ಯಯ 2021-22 ರಲ್ಲಿ ಒದಗಿಸಲಾದ ಅನುದಾನ | 2021-22 ರಲ್ಲಿ ನಾಲ್ಕನೆ ಕಂತಿನಲ್ಲಿ ಬಿಡುಗಡೆ ಮಾಡಲಾದ ಅನುದಾನ |
|---|---|---|---|---|
| 1) | ಮೀನುಗಾರಿಕೆ ದೋಣಿಗಳಿಗೆ ಡೀಸೆಲ್-ಮಾರಾಟ ತೆರಿಗೆ ಮರುಪಾವತಿ | 2405-00-103-0-23 | | |
| | | 100 | 9688.00 | 2384.50 |
| | | 422 | 200.00 | 50.00 |
| | | ಒಟ್ಟು | 9888.00 | 2434.50 |

Kamakshi 21

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡು ಕಡ್ಡಾಯವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ಗಳನ್ನು ಹಾಗೂ ಖರೀದಿ ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಐಡಿ/ಪಿಎಂಯು-92/2015-16, ದಿನಾಂಕ 27-03-2018ರ ಕ್ರಮ ಸಂಖ್ಯೆ: 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-166/ಮೀಇಯೋ/2021, ದಿನಾಂಕ 26-04-2021 ರನ್ವಯ ಮುಂದುವರೆಸಲಾದ ಯೋಜನೆಗಳನ್ನು ಅನುಮೋದಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಸದರಿ ವೆಚ್ಚವನ್ನು 2021-22ನೇ ಸಾಲಿನ ಲೆಕ್ಕ ಶೀರ್ಷಿಕೆ 2405-ಮೀನುಗಾರಿಕೆ ಅಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಹಿಂದಿನ ತ್ರೈಮಾಸಿಕಗಳಲ್ಲಿ ಬಿಡುಗಡೆ ಮಾಡಿದ ಅನುದಾನದಲ್ಲಿ ಶೇ.75 ರಷ್ಟು ವೆಚ್ಚ ಮಾಡದಿದ್ದರೂ ಹಣ ಬಿಡುಗಡೆ ಮಾಡುವಾಗ ಅನುಷ್ಠಾನಗೊಳಿಸುವ ಏಜೆನ್ಸಿಗಳ (ನಿಗಮ / ಮಂಡಳಿಗಳು, ಮತ್ತಿತರ ಸಂಸ್ಥೆಗಳು / ಇಲಾಖಾಧಿಕಾರಿಗಳು) ಹೆಸರಿನಲ್ಲಿ ಇರುವ ಪಿಡಿ ಖಾತೆ / ಬ್ಯಾಂಕ್ ಖಾತೆಗಳಲ್ಲಿ ಅನುದಾನದ ಮೊತ್ತವನ್ನು ಠೇವಣಿ ಇಟ್ಟಿಲ್ಲದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಹಾಗೂ ಬಿಡುಗಡೆ ಮಾಡಲಾದ ಅನುದಾನವನ್ನು ಪೂರ್ಣವಾಗಿ ಪ್ರಸಕ್ತ ಸಾಲಿನಲ್ಲಿಯೆ ವೆಚ್ಚ ಮಾಡುವುದು. ವೆಚ್ಚ ಮಾಡದಿದ್ದಲ್ಲಿ, ಆ ಅನುದಾನವನ್ನು ಸರ್ಕಾರಕ್ಕೆ ಅಧ್ಯರ್ಪಣೆ ಮಾಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ಼್ ಡಿ/1/ಟಿಎಫ್ ಪಿ/2021, ದಿನಾಂಕ 31-12-2021 ರಲ್ಲಿ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 21/1/2022
(ಕಾಮಾಕ್ಷಿ ಯು.ಎ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

21/01/2022

**ಇವರಿಗೆ**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.

4) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ
6) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
7) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8) ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.